ಆದರೆ ಮಾನ್ಯ ಅಧ್ಯಕ್ಷರಿಗೆ ಒಂದು ಮನವಿ ಮಾಡುತ್ತೇನೆ. ವಿರೋಧ ಪಕ್ಷದಲ್ಲಿ ಕುಳಿತು ಈ ಮನೆಯಲ್ಲಿ ಕೆಲಸ ಮಾಡಬೇಕಾದರೆ ಅಧಿಕೃತ ವಿರೋಧ ಪಕ್ಷದವರಿಗೆ ಹೆಚ್ಚಿನ ತಾಳ್ಮೆ ಬೇಕಾಗುತ್ತದೆ. ಇದು ನನ್ನ ಕೋರಿಕೆ. Submission ಯಾವಾಗ ಮಾಡಬೇಕೆಂದರೆ admit ಮಾಡುವುದಕ್ಕೆ ಒಪ್ಪದಿದ್ದಾಗ submission ಮಾಡಬೇಕು. Submission ಗಿಂತ ಮೊದಲೇ admit ಮಾಡಿ ನಿಯಮ 69ರ ಅಡಿಯಲ್ಲಿ ಕೊಟ್ಟಮೇಲೆ submission ಅವಶ್ಯಕತೆ ಇದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ದಯಮಾಡಿ ಮತ್ತೆ ಯಾವುದೂ ಈ ರೀತಿ ಮಾಡುವುದು ಬೇಡ ಎಂದು ಹೇಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಹಾಗಾದರೆ ನೀವು ನಿಯಮ 60ರಲ್ಲಿ ಚರ್ಚೆಗೆ ತೆಗೆದುಕೊಂಡು ಬಿಡುತ್ತೀರಾ? ಈಗ ನಿಯಮ 69ರಲ್ಲಿ ಚರ್ಚೆ ಮಾಡುವುದು. ನಿಯಮ 69ರಲ್ಲಿ ಚರ್ಚೆ ಮಾಡುವುದಾದರೆ submission ಏನು ಬಂತು? ಪೂರ್ಣ ಚರ್ಚೆ ಅದರಲ್ಲಿಯೇ ಮಾಡಿ.

ಅಧ್ಯಕ್ಷರು: ಆಯಿತು, ರೇವಣ್ಣ ಸಾಕು.

ಶ್ರೀ ಹೆಚ್.ಡಿ.ರೇವಣ್ಣ: ಈ ವಿಚಾರದ ಬಗ್ಗೆ ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ನಾವೇ ಮೊದಲು ಕೊಟ್ಟಿರುವುದು. ಇದನ್ನು ವಿರೋಧ ಪಕ್ಷದವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

6) ವಿಷಯ: ಕಸ್ತೂರಿ ರಂಗನ್ ವರದಿ ಬಗ್ಗೆ ಚರ್ಚೆ ಮಾಡಲು ಅವಕಾಶ ಕೋರುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ತಮಗೆ ಮತ್ತು ಜೆಡಿಎಸ್ ನಾಯಕರಾದಂತಹ ಮಾನ್ಯ ಕುಮಾರಸ್ವಾಮಿಯವರಿಗೂ ಎಲ್ಲರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಲ್ಲಿ ಜೆಡಿಎಸ್ ಅಥವಾ ಬಿಜೆಪಿ ಎಂದು ನಮ್ಮ ಯಾರ ವೈಯಕ್ತಿಕವಾಗಿ ಪ್ರತಿಷ್ಠೆಯ ವಿಷಯಲ್ಲ. ಈ ಸದನದಲ್ಲಿ ನಿಯಮಾವಳಿಗಳು ಮತ್ತು ಸತ್ಸಂಪ್ರದಾಯಗಳು ಏನಿವೆ, ಅದನ್ನು

ನಾವೆಲ್ಲರೂ ಗೌರವಿಸಿ ಎತ್ತಿ ಹಿಡಿಯುವಂತಹ ವಿಚಾರದಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಟ್ಟು ಮಾನ್ಯ ಕುಮಾರಸ್ವಾಮಿಯವರು ಸದನವನ್ನು ನಿಯಮಾವಳಿ ಪ್ರಕಾರ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ತಮಗೂ ಮತ್ತು ಅವರಿಗೂ ಅಭಿನಂದಿಸುತ್ತೇನೆ. ನಾನು ಯಾವ ವಿಷಯವನ್ನೂ ಪ್ರಸ್ತಾಪಿಸುವುದಕ್ಕೆ ಬಯಸುವುದಿಲ್ಲ. ಈಗ ಕಸ್ತೂರಿ ರಂಗನ್ ವರದಿ ವಿಷಯದಲ್ಲಿ ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ಹಾಗಾಗಿ ನಾನು ಗಾಡ್ಗಿಳ್ ಸಮಿತಿ ಹೇಗೆ ರಚನೆಯಾಯಿತು, ಅದಾದ ನಂತರ ಕಸ್ತೂರಿ ರಂಗನ್ ಸಮಿತಿ ಹೇಗೆ ರಚನೆಯಾಯಿತು? ಕಸ್ತೂರಿ ರಂಗನ್ ಸಮಿತಿ ಹಿಂದೆ ಯುಪಿಎ ಸರ್ಕಾರ ಇದ್ದಾಗ ಎಲ್ಲಾ ರಾಜ್ಯಗಳ ಅಭಿಪ್ರಾಯವನ್ನು ಕೇಳುತ್ತೇವೆಂದು ಮಾನ್ಯ ವೀರಪ್ಪ ಮೊಯ್ಲಿಯವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಏನು ಹೇಳಿದ್ದರು? ಆ ನಂತರದಲ್ಲಿ ಅದು ಸುಪ್ರೀಂ ಕೋರ್ಟ್‌ನ ಗ್ರೀನ್ ಬೆಂಚ್‌ಗೆ ಹೋದಾಗ, ಎಲ್ಲಾ ರಾಜ್ಯಗಳ ಅಭಿಪ್ರಾಯವನ್ನು ಕೇಳಬೇಕೆಂದು ಗ್ರೀನ್ ಬೆಂಚ್ ಹೇಳಿತು. ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರದಲ್ಲಿ ಕಸ್ತೂರಿ ರಂಗನ್ ವರದಿಯ implication ಮಾಡಿದ ಮೇಲೆ ಅದರ ಪರಿಣಾಮ ಏನಾಗುತ್ತದೆನ್ನುವ ಬಗ್ಗೆ ಗಂಭೀರವಾಗಿ ತೆಗೆದುಕೊಂಡಿಲ್ಲ. ಸುಪ್ರೀಂ ಕೋರ್ಟ್‌ಗೆ ನಮ್ಮ ಸ್ಥಳೀಯ ಗ್ರಾಮಗಳಲ್ಲಿರುವ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಅಧ್ಯಯನ ಮಾಡಿ ಅದರ ವರದಿಯನ್ನು ಸಂಗ್ರಹಿಸಿ ಏನು ಸುಪ್ರೀಂ ಕೋರ್ಟ್‌ಗೆ ಕೊಡಬೇಕಾಗಿತ್ತು, ಅದನ್ನು ಕೊಡುವಂತಹ ವಿಚಾರದಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡಿಲ್ಲ. ಈಗ ಮತ್ತೆ ಸುಪ್ರೀಂ ಕೋರ್ಟ್‌ಗೆ ಕಾಲಾವಕಾಶ ಬೇಕೆಂದು ಕೇಳುತ್ತಿದ್ದಾರೆ. ಅದಕ್ಕೆ ಕಾಲಾವಕಾಶ ಕೇಳುವುದು ಬೇರೆ ಪ್ರಶ್ನೆ. ಅವರು ಕೊಟ್ಟಿರುವ ಕಾಲಾವಕಾಶ ಡಿಸೆಂಬರ್ 15ಕ್ಕೆ ಮುಗಿದು ಹೋಗುತ್ತದೆ. ಆದರೆ ಸುಪ್ರೀಂ ಕೋರ್ಟ್ ಗ್ರೀನ್ ಬೆಂಚ್‌ನಲ್ಲಿ ರಾಜ್ಯ ಸರ್ಕಾರ ಯಾವ ಜವಾಬ್ದಾರಿಯುತವಾದಂತಹ ಪಾತ್ರವನ್ನು ನಿರ್ವಹಿಸಬೇಕಿತ್ತೋ, ಅದನ್ನು ನಿರ್ವಹಿಸಿಲ್ಲ. ಅದರಿಂದಾಗಿ ಪಶ್ಚಿಮ ಘಟ್ಟದಲ್ಲಿರುವ ಜನಜೀವನದ ಮೇಲೆ ಬಹಳ ದೊಡ್ಡ ಪರಿಣಾಮವಾಗುತ್ತಿದೆ. ನಾವೆಲ್ಲರೂ ಪಶ್ಚಿಮ ಘಟ್ಟವನ್ನು ಉಳಿಸಬೇಕು, ಪ್ರಕೃತಿಯ ವೈಶಿಷ್ಟತೆಗಳನ್ನು,

ಜೀವ ವೈವಿಧ್ಯತೆಗಳನ್ನು ಉಳಿಸಬೇಕೆನ್ನುವುದಕ್ಕೆ ನಮ್ಮ ಪಕ್ಷದಲ್ಲಿರುವ ನಾವೆಲ್ಲರೂ ಬದ್ಧರಾಗಿರಲೇ ಬೇಕು, ಬದ್ಧರಾಗಿದ್ದೇವೆ. ಆದರೆ ಅಲ್ಲಿಯ ಜನ ಜೀವನ ಏನಿದೆ, ಆ ಜನಜೀವನಕ್ಕೂ ಸಹ ಯಾವುದೇ ರೀತಿಯ ಅಡ್ಡಿ ಆತಂಕಗಳು ಆಗದೆ, ಅಭಿವೃದ್ಧಿಯ ಕೆಲಸಗಳು ನಿರಾಳವಾಗಿ ನಡೆಯುವಂತೆ, ನಮ್ಮ ಕೃಷಿ ಚಟುವಟಿಕಗಳು ಸಮರ್ಪಕವಾಗಿ ನಡೆಯುವಂತೆಯೂ ಸಹ ನೋಡಿಕೊಳ್ಳಬೇಕಾಗಿರುವಂಥದ್ದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಈಗ ರಾಜ್ಯ ಸರ್ಕಾರಗಳಿಗೆ ಈ ವಿಷಯವಾಗಿ ಸ್ಪಷ್ಟೀಕರಣ ಕೊಡಿ ಎಂದು ಸುಪ್ರೀಂ ಕೋರ್ಟ್ ಕೇಳಿದಾಗ ಕೇರಳ ಸರ್ಕಾರ ಚೆನ್ನಾಗಿ ಮಾಡಿಕೊಟ್ಟಿತು. ಕೇರಳ ರಾಜ್ಯ ಸರ್ಕಾರ ಹಳ್ಳಿ ಹಳ್ಳಿಗಳಿಗೆ ತನ್ನ ಅಧಿಕಾರಿಗಳನ್ನು ಕಳುಹಿಸಿ ಅಲ್ಲಿಯ ಪರಿಸ್ಥಿತಿಗಳು ಹೇಗಿದೆಯೆಂಬುದನ್ನು ಅಧ್ಯಯನ ಮಾಡಿಸಿ, ಅದರ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಕೊಟ್ಟಿದೆ. ಇದರಿಂದ ಕೇರಳ ಸರ್ಕಾರಕ್ಕೆ ಅನೇಕ ರೀತಿಯ relaxations ಸಿಗುತ್ತಿದೆ. ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ, ಇದರಲ್ಲಿ ಗುಜರಾತ್, ತಮಿಳುನಾಡು, ಮಹಾರಾಷ್ಟ್ರ, ಗೋವಾ ರಾಜ್ಯಗಳಿವೆ. ಈ ಎಲ್ಲಾ ರಾಜ್ಯಗಳಲ್ಲಿ ಏನು ಜಾರಿಗೊಳ್ಳುತ್ತಿದೆ, ಉಳಿದ ರಾಜ್ಯಗಳು ಯಾವ ಜವಾಬ್ದಾರಿಯನ್ನು ತೋರಿಸುತ್ತಿದೆ? ನಮ್ಮ ರಾಜ್ಯ ಸರ್ಕಾರ ನಿದ್ರಾವಸ್ಥೆಯಲ್ಲಿದೆ, ಜನಜೀವನದ ಬಗ್ಗೆ ಕಿಂಚಿತ್ತೂ ಜವಾಬ್ದಾರಿ ಕಾಳಜಿ ಇಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಒಪ್ಪಿಕೊಳ್ಳುವುದಿಲ್ಲ. ಇದು ಸರಿಯಲ್ಲ. ಇದು ಬೇಜವಾಬ್ದಾರಿಯಾಗಿ ಮಾತನಾಡಿದ ಮಾತು. ತಾವು preliminary submission ಮಾಡುವುದಕ್ಕೆ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ದೇಶಪಾಂಡೆಯವರೆ ನಾನು ಹೇಗೆ ಮಾತನಾಡಬೇಕೆಂದು ಗೊತ್ತಿದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ತಾವು ಏನು ಮಾಡಬೇಕೆಂಬ suggestion ಕೊಡಿ. ಈ ಸದನದಲ್ಲಿ ಎಲ್ಲಾ ಸದಸ್ಯರಿಗೂ ಚಿಂತನೆ ಇದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಚರ್ಚೆ ಮಾಡಿ. ಸರ್ಕಾರ ಏನೂ ಮಾಡಿಲ್ಲವೆಂದು ಆಪಾದನೆ ಮಾಡುವುದು ಸರಿ ಇಲ್ಲ. ಸರ್ಕಾರ ಒಳ್ಳೆಯದನ್ನು ಮಾಡುವ ಪ್ರಯತ್ನ ಮಾಡುತ್ತಿದೆ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ.: ಮಾನ್ಯ ಅಧ್ಯಕ್ಷರೆ, ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಸರ್ಕಾರ ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ನೀವು suggestions ಕೊಡಿ. ಸರ್ಕಾರ ಚರ್ಚೆ ಮಾಡಿ ನಿರ್ಣಯ ಮಾಡುತ್ತದೆಂದು ಹೇಳಿದೆ. ಅವರು ಚರ್ಚೆ ಮಾಡಲಿ.

ಶ್ರೀ ವಿ.ಸುನಿಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್‌ಗೆ 15ನೇ ತಾರೀಖಿನನೊಳಗೆ report ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಸಮಯವನ್ನು ವ್ಯರ್ಥ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಶಿವರಾಂ ಅರಬೈಲ್ ಹೆಬ್ಬಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೇರಿಯವರಿಗೆ ಕಳಕಳಿಯಿದ್ದಿದ್ದರೆ ಕಾರವಾರದಲ್ಲಿ ನಡೆದ ಸಭೆಗೆ ಹಾಜರಾಗಬೇಕಿತ್ತು. ಆ ಸಭೆಗೆ ಅವರು ಹಾಜರಾಗಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸರ್ಕಾರ ಹೇಗಿದೆಯೆಂಬುದು ರಾಜ್ಯದ ಜನರಿಗೆ ಗೊತ್ತಿದೆ. ಈಗ ಸುಪ್ರೀಂ ಕೋರ್ಟ್ Green Bench ಗೆ ರಾಜ್ಯ

ಸರ್ಕಾರ ಪಶ್ಚಿಮ ಘಟ್ಟದ ಜನ ಜೀವನ ನಿರಾಳವಾಗಿ ನಡೆಯಬೇಕೆಂದರೆ ಅಲ್ಲಿ ಅಭಿವೃದ್ಧಿ ಕೆಲಸವಾಗಬೇಕು. ಅಲ್ಲಿ ರಸ್ತೆಯಾಗಬೇಕು, ಕುಡಿಯುವ ನೀರು ಬೇಕು, ಅಭಿವೃದ್ಧಿ ಕೆಲಸವಾಗಬೇಕು. ಈ ಕಸ್ತೂರಿರಂಗನ್ ವರದಿ ಹೇಗೆ ಆಗಿದೆಯೆಂದರೆ, ಇವರು Indian Remote Sensing ಉಪಗ್ರಹ ಏನು ದತ್ತಾಂಶಗಳನ್ನು ನೀಡಿತ್ತು. ಆ ಉಪಗ್ರಹ ದತ್ತಾಂಶವನ್ನು ಆಧರಿಸಿ ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ತೆಂಗಿನ ಮರಗಳು ಹಸಿರಾಗಿ ಕಂಡಿವೆ, ಅಡಿಕೆ ಮರಗಳು ಹಸಿರಾಗಿ ಕಂಡಿವೆ, ರಬ್ಬರ್ ಮತ್ತು ಕಾಫಿ ಪ್ಲಾಂಟೇಷನ್ ಹಸಿರಾಗಿ ಕಂಡಿವೆ. ರೈತರ ಈ ಎಲ್ಲಾ ಭೂ ಭಾಗವೂ ಹಸಿರಾಗಿ ಕಂಡಂಥದ್ದನ್ನು ಇವರು ಅತೀ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದರೆ, ನಮಗೆ ಕೃಷಿ ಚಟುವಟಿಕೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಕೃಷಿಗೆ ಸಂಬಂಧ ಪಟ್ಟಂತಹ ಯಾವ ಚಟುವಟಿಕೆಗಳನ್ನೂ ಮಾಡುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ನಮಗೆ ರಸ್ತೆಯಾಗಬೇಕು, ನೀರು ಸಿಗಬೇಕು, ಶಾಲೆ, ಆಸ್ಪತ್ರೆಗಳು ಅಂಗನವಾಡಿಗಳು ಬೇಕು. ಅದರ ಜೊತೆಗೆ ನಮ್ಮ ಕೃಷಿ ಚಟುವಟಿಕೆ ನಡೆಯಬೇಕು. ಇವತ್ತು ಸುಪ್ರೀಂ ಕೋರ್ಟ್ ಕಸ್ತೂರಿ ರಂಗನ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವುದಕ್ಕೆ ಮುಂದಾದರೆ ನಮ್ಮ ಪಶ್ಚಿಮಘಟ್ಟದಲ್ಲಿರುವ ಜನರ ಜನಜೀವನಕ್ಕೆ ಬಹಳ ದೊಡ್ಡ ತೊಂದರೆಯಾಗುತ್ತದೆ. ನಾವು ಈಗಾಗಲೇ ಅನೇಕ ಕಾರಣಗಳಿಗೋಸ್ಕರವಾಗಿ ಆತಂಕವನ್ನು ಎದುರಿಸುತ್ತಿದ್ದೇವೆ. ಒಂದು ಬದಿ ಆನೆ ಬಂತು, ಒಂದು ಬದಿ ಹುಲಿ ಬಂತು, ಒಂದು ಬದಿ ಕರಡಿ ಬಂತು, ಈ ಸಮಸ್ಯೆಯಲ್ಲಿ ನಮ್ಮ ಜೀವನವನ್ನು ಮತ್ತು ನಮ್ಮ ಕೃಷಿ ಚಟುವಟಿಕೆಯನ್ನು ಹಾಳು ಮಾಡುತ್ತಿರುವಂಥದ್ದನ್ನು ಅನುಭವಿಸುತ್ತಿದ್ದೇವೆ. ಇದುವರೆಗೂ ಅತಿಕ್ರಮಣಕಾರರಿಗೆ ಪಟ್ಟಾ ಸಿಗದೇ, ಮಂಜೂರಿ ಸಿಗದೇ, ಅದಕ್ಕೆ ನಡೆಯುತ್ತಿರುವಂಥ ಪ್ರಯತ್ನಗಳು ಬೇರೆ ವಿಷಯವಿದೆ. ಇನ್ನೂ ಹತ್ತಾರು ರೀತಿಯ ಸಮಸ್ಯೆಗಳನ್ನು ಪಶ್ಚಿಮಘಟ್ಟದಲ್ಲಿರುವವರು ಅನುಭವಿಸುತ್ತಿದ್ದೇವೆ. ನಮ್ಮ ಜವಾಬ್ದಾರಿ ಈ ಪಶ್ಚಿಮ ಘಟ್ಟವನ್ನು ಉಳಿಸಿಕೊಳ್ಳಬೇಕು, ಜೀವ ವೈವಿಧ್ಯತೆಯನ್ನು ಉಳಿಸಿಕೊಳ್ಳಬೇಕು, ಅದೂ ಸಹ ಜವಾಬ್ದಾರಿ ಇದೆ. ಆದರೆ ನಾವು ಕಸ್ತೂರಿ ರಂಗನ್ ವರದಿಗೆ ಕೆಲವು ಬದಲಾವಣೆಗಳನ್ನು

ಸೂಚಿಸಿದ್ದೇವೆ. ಅದನ್ನು ನಾವು ಇಲ್ಲಿ ವಿಷಯವನ್ನು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಾಗ ಎಲ್ಲವನ್ನು ಹೇಳುತ್ತೇವೆ. ಅದನ್ನು ಆಧರಿಸಿ ರಾಜ್ಯ ಸರ್ಕಾರ ಪ್ರಾಥಮಿಕ ಹಂತದಿಂದ ವರದಿಯನ್ನು ಸುಪ್ರೀಂ ಕೋರ್ಟ್‌ನ Green Bench ಗೆ ತಕ್ಷಣ ಕಳುಹಿಸಬೇಕು. ಈಗ 15ನೇ ತಾರೀಖು last date ಎಂದು ಹೇಳುತ್ತಿದ್ದಾರೆ, ಅದರ extensionಗೆ ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಈಗಾಗಲೇ ಸರ್ಕಾರ ಎರಡು ತಿಂಗಳ ಸಮಯ ತೆಗೆದುಕೊಳ್ಳುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. Forest Minister ಹೇಳಿದ್ದಾರೆ. ತಾವು ಚರ್ಚೆಯಲ್ಲಿ ಎಷ್ಟು ಒಳ್ಳೆಯ ಸಲಹೆಗಳನ್ನು ಕೊಡುತ್ತೀರಿ. ಆ ಎಲ್ಲಾ ಸಲಹೆಗಳನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಒಂದು ಕಡೆ ಪರಿಸರ ಸಂರಕ್ಷಣೆಯಾಗಬೇಕು, ಮಾನವ ಜೀವಿತದಲ್ಲಿ ಕೃಷಿ ಮಾಡುವುದಕ್ಕೆ, ತೋಟಗಾರಿಕೆ ಮಾಡುವುದಕ್ಕೆ ಅವಕಾಶವಾಗಬೇಕು. ಇದರಲ್ಲಿ ಯಾವ ಭಿನ್ನಾಭಿಪ್ರಾಯವಿದೆ? ಯಾವ ಭಿನ್ನಾಭಿಪ್ರಾಯವಿಲ್ಲ. ತಾವು ಸಾಕಷ್ಟು ಚರ್ಚೆ ಮಾಡಿ, ಈ ಭಾಗದ ಸದಸ್ಯರು, ಆ ಭಾಗ ಸದಸ್ಯರು ಚರ್ಚೆ ಮಾಡಲಿ, ತಾವು ಏನು ಸಲಹೆಗಳನ್ನು ಕೊಡುತ್ತೀರಿ. ನಾವು ಎಲ್ಲವನ್ನೂ ಸ್ವಾಗತ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಸರ್ಕಾರ ಎಚ್ಚೆತ್ತುಕೊಂಡು ಜಾಗೃತವಾಗಿ ಸ್ಪಂದಿಸುವಂಥ ಕೆಲಸ ಏನು ಮಾಡಬೇಕೋ ಅದನ್ನು ಇದುವರೆಗೂ ಮಾಡಿಲ್ಲ.

ಅಧ್ಯಕ್ಷರು: ಆಯಿತು, ಮತ್ತೆ ಅದಕ್ಕೆ ಹೋಗಬೇಡಿ, ಸುಮ್ಮನೆ ಕತೆ ಹೇಳಿಕೊಂಡು .. ಹೋದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರ ಬಗ್ಗೆ ವಿಸ್ತೃತವಾಧ ಅವಕಾಶವನ್ನು ಕೊಡಬೇಕೆಂದು ಕೇಳುತ್ತಾ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ನಾವು cabinet sub-committee ಮಾಡಿದ್ದೇವೆ, ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಹೇಳಿದ್ದೇನೆ.

ಅಧ್ಯಕ್ಷರು: Ok. ನಾಳೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ನಿಲುವಳಿ ಸೂಚನೆಯ ಅಗತ್ಯವಿಲ್ಲ. ಇನ್ನು ಮಾನ್ಯ ಕುಮಾರಸ್ವಾಮಿಯವರೆ ಮಾತನಾಡಿ.

(ಗೊಂದಲ)

ಶ್ರೀ ಶಿವರಾಂ ಅರಬೈಲ್ ಹೆಬ್ಬಾರ್: ಕಾರವಾರದಲ್ಲಿ ಸಭೆ ಆಯಿತು. ಇಡೀ ಜಿಲ್ಲೆಯಲ್ಲಿ ಈ ವರದಿಯ ಬಗ್ಗೆ ಪ್ರಸ್ತಾಪ ಆಗಿತ್ತು. ಅವತ್ತು ಕಾಗೇರಿಯವರು ಬರಲಿಲ್ಲ. ನಾವು ಅದೇ ಪ್ರದೇಶದಿಂದ ಬಂದವರು. 90% ರಷ್ಟು ಕಸ್ತೂರಿ ರಂಗನ್ ವರದಿಯಿಂದ ತೊಂದರೆಗೊಳಗಾಗತಕ್ಕವರು ನಾವು. ಅವತ್ತು ಅಲ್ಲಿ ಏನೂ ಹೇಳದೆ.. ಇವತ್ತು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಚರ್ಚೆಗೆ ನನಗೆ ಅವಕಾಶ ಕೊಟ್ಟರೆ ಹೇಳಿ ನಾವು ಹೇಳುತ್ತೇವೆ.

ಅಧ್ಯಕ್ಷರು: ಇಲ್ಲ. ಬೇಡ.

ನಿಯಮ 69ರಡಿಯಲ್ಲಿ ಚರ್ಚೆ

7) ವಿಷಯ: ಕಬ್ಬು ಬೆಳೆಗಾರರಿಗೆ ಬೆಲೆ ನಿಗದಿ ಮಾಡಿರುವ ಬಗ್ಗೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸದಿಂದ ಸದನದಲ್ಲಿ ನಮ್ಮ ಬಿ.ಜೆ.ಪಿ. ಸ್ನೇಹಿತರು ಕಬ್ಬಿನ ಬೆಲೆಯ ಜೊತೆಯಲ್ಲಿ ಭತ್ತ ಮತ್ತು ಜೋಳ, ಟೊಮೊಟೊ ಬೆಳೆಯನ್ನು ಸೇರಿಸಿಕೊಂಡು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಇವತ್ತು ಪ್ರಮುಖವಾಗಿ ಕಬ್ಬು ಬೆಳೆಗಾರರ ಕಳೆದ ವರ್ಷದ ಬಾಕಿ ಹಣವನ್ನು ಕಾರ್ಖಾನೆ ಮಾಲೀಕರು ಕೊಡದೇ